ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಭಿವೃದ್ಧಿ ಮತ್ತು ಪಂ.ರಾಜ್.ಇಲಾಖೆ,
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-560 001
ದೂರವಾಣಿ ಸಂಖ್ಯೆ:080-22342161, E-mail:karnregs@gmail.com

ಸಂ ಗ್ರಾಅಪ 568 ಉಖಾಯೋ 2017 ದಿನಾಂಕ: 06-01-2018

## ಟೆಂಡರ್ ಪ್ರಕಟಣೆ ( Tender Notification)

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕರ್ನಾಟಕ ಅಧಿನಿಯಮ -2005 ರ ಅನ್ವಯ ಕರ್ನಾಟಕ ರಾಜ್ಯ ಗ್ರಾಮೀಣ ಉದ್ಯೋಗ ಖಾತ್ರಿ ನಿಧಿ (ಕ.ರಾ.ಗ್ರಾ.ಉ.ಖಾ.ನಿ.) ಸಂಘವನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಅಡಿಯಲ್ಲಿ ನೊಂದಾಯಿಸಲಾಗಿದೆ. ಕರ್ನಾಟಕ ರಾಜ್ಯ ಗ್ರಾಮೀಣ ಉದ್ಯೋಗ ಖಾತ್ರಿ ನಿಧಿ ಸಂಘದ 2017-18 ರಿಂದ 2018-19 ರವರೆಗಿನ 2 ವರ್ಷಗಳ ಅವಧಿಯ ರಾಜ್ಯ ಮಟ್ಟದ ಲೆಕ್ಕಪತ್ರ ಕ್ರೋಢೀಕರಣ ಹಾಗೂ ದೃಢೀಕರಣವನ್ನು ಸನ್ನದು ಲೆಕ್ಕಿಗರಿಂದ ಪಡೆಯುವ ಸಲುವಾಗಿ ಆಸಕ್ತಿಯುಳ್ಳ ಮತ್ತು ಅನುಭವ ಹೊಂದಿರುವ ಸನ್ನದು ಲೆಕ್ಕಿಗ ಸಂಸ್ಥೆಯ ಆಯ್ಕೆಗಾಗಿ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಮತ್ತು ಅನುಭವ ಹೊಂದಿರುವ ಸನ್ನದು ಲೆಕ್ಕಿಗ ಸಂಸ್ಥೆಯವರು ಟೆಂಡರ್ ಸಲ್ಲಿಸಲು ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ಲಕೋಟೆಗಳನ್ನು ಪ್ರತ್ಯೇಕವಾಗಿ ಮೊಹರಾದ ಲಕೋಟೆಯಲ್ಲಿ ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಕೊಠಡಿ ಸಂಖ್ಯೆ 211, (ಮುಖ್ಯ ಆರ್ಥಿಕ ಸಲಹೆಗಾರರ ಶಾಖೆ), 2ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ರವರಿಗೆ ಸಲ್ಲಿಸಬಹುದಾಗಿರುತ್ತದೆ.

ಟೆಂಡರ್ ಪ್ರಕಟಣೆಯ ವೇಳಾಪಟ್ಟಿ ಈ ಕೆಳಕಂಡಂತಿದೆ.

ಇ.ಎಂ.ಡಿ ಮೊತ್ತ ರೂ.5000/-(ರೂಪಾಯಿ ಐದು ಸಾವಿರ ಮಾತ್ರ) ಗಳ ಡಿ.ಡಿ.ಯನ್ನು ಆಯುಕ್ತರು, **KSEGF** ಖಾತೆ- ಹೆಸರಿಗೆ ಪಡೆದು ತಾಂತ್ರಿಕ ಬಿಡ್‌ನೊಂದಿಗೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

| ಕ್ರ.ಸಂ | ವಿವರ | ವೇಳಾಪಟ್ಟಿ |
|---|---|---|
| 1 | ಟೆಂಡರ್ ಪ್ರಾರಂಭ ದಿನಾಂಕ ಮತ್ತು ವೇಳೆ | ದಿನಾಂಕ 10-01-2018 ಬೆಳಿಗ್ಗೆ 11 ಘಂಟೆಯ ನಂತರ |
| 2 | ಟೆಂಡರ್ ಮುಕ್ತಾಯ ದಿನಾಂಕ ಮತ್ತು ವೇಳೆ | ದಿನಾಂಕ 12-02-2018 ಸಂಜೆ 4 ಘಂಟೆಯೊಳಗಾಗಿ |
| 3 | ಟೆಂಡರ್ ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ವೇಳೆ | ದಿನಾಂಕ 22-01-2018 ಬೆಳಿಗ್ಗೆ 11 ಘಂಟೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, 2ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು |
| 4 | ಟೆಂಡರ್‌ಗಳನ್ನು ಸಲ್ಲಿಸಬೇಕಾದ ವಿಳಾಸ | ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ. ಅ ಮತ್ತು ಪಂ.ರಾಜ್ ಇಲಾಖೆ, ಕೊಠಡಿ ಸಂಖ್ಯೆ 211, ಮುಖ್ಯ ಆರ್ಥಿಕ ಸಲಹೆಗಾರರ ಶಾಖೆ, 2ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001<br>ದೂರವಾಣಿ ಸಂಖ್ಯೆ 080-22342161 |
| 5 | ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ, ವೇಳೆ ಮತ್ತು ಸ್ಥಳ | ದಿನಾಂಕ 14-02-2018 ಬೆಳಿಗ್ಗೆ 11 ಘಂಟೆಗೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಕೊಠಡಿ ಸಂಖ್ಯೆ 211, (ಮುಖ್ಯ ಆರ್ಥಿಕ ಸಲಹೆಗಾರರ ಶಾಖೆ), 2ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 |
| 6 | ಆರ್ಥಿಕ ಬಿಡ್ ತೆರೆಯುವ ದಿನಾಂಕ, ವೇಳೆ ಮತ್ತು ಸ್ಥಳ<br>(ಅರ್ಹತೆ ಹೊಂದಿರುವ ತಾಂತ್ರಿಕ ಬಿಡ್‌ದಾರರ ಬಿಡ್‌ಗಳು ಮಾತ್ರ) | ದಿನಾಂಕ 16-02-2018 ಬೆಳಿಗ್ಗೆ 11 ಘಂಟೆಗೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, 2ನೇ ಮಹಡಿ, 3ನೇಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 |

1.0 ಸನ್ನದು ಲೆಕ್ಕಿಗ ಸಂಸ್ಥೆಯವರು ಈ ಕೆಳಕಂಡ ತಾಂತ್ರಿಕ ಅರ್ಹತೆ ಹೊಂದಿರಬೇಕು.

1. ಸನ್ನದು ಲೆಕ್ಕಿಗ ಸಂಸ್ಥೆಯು ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರಲ್ಲಿ ನೊಂದಣಿ ಹೊಂದಿರಬೇಕು.
2. ಸನ್ನದು ಲೆಕ್ಕಿಗ ಸಂಸ್ಥೆಯ ಪ್ರಧಾನ ಕಾರ್ಯಸ್ಥಾನವು ಬೆಂಗಳೂರಿನಲ್ಲಿರಬೇಕು.
3. ಬ್ಯಾಂಕ್ ತಪಾಸಣೆಯನ್ನು ಹೊರತುಪಡಿಸಿ ಸರ್ಕಾರಿ ಸಂಘ-ಸಂಸ್ಥೆಗಳ ತಪಾಸಣೆಯಲ್ಲಿ ಅನುಭವವನ್ನು ಹೊಂದಿರಬೇಕು.
4. ಸರ್ಕಾರದ ಸ್ವಾಮ್ಯದ/ವಿಶ್ವಬ್ಯಾಂಕ್ ನೆರವಿನ ಯೋಜನೆಗಳ ಲೆಕ್ಕಪತ್ರಗಳ ಲೆಕ್ಕ ತಪಾಸಣೆಯಲ್ಲಿ 3 ವರ್ಷಗಳ ಅನುಭವವನ್ನು ಹೊಂದಿರಬೇಕು.
5. ಸಂಸ್ಥೆಯು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಲೆಕ್ಕಪತ್ರಗಳ ಲೆಕ್ಕ ತಪಾಸಣೆ ಕೈಗೊಂಡಿರುವ ಬಗ್ಗೆ ಕನಿಷ್ಠ 1 ವರ್ಷಗಳ ಅನುಭವವನ್ನು ಹೊಂದಿರಬೇಕು.
6. ತಾಂತ್ರಿಕ ಬಿಡ್ ಜೊತೆಗೆ ಇ.ಎಂ.ಡಿ.ಯಾಗಿ ರೂ. 5000/-ಗಳ ಬೇಡಿಕೆ ಹುಂಡಿಯನ್ನು (Demand Draft) **ಆಯುಕ್ತರು, KSEGF ಖಾತೆ- ಹೆಸರಿಗೆ ಪಡೆದು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಬೇಡಿಕೆ ಹುಂಡಿ** (Demand Draft) ಸಲ್ಲಿಸದಿದ್ದಲ್ಲಿ ಅಂತಹವರ ಬಿಡ್‌ನ್ನು ತಿರಸ್ಕರಿಸಲಾಗುವುದು.

**2.0 ಟೆಂಡರ್‌ದಾರರು ಎರಡು ಲಕೋಟೆಗಳ ಪದ್ಧತಿಯಲ್ಲಿ ಟೆಂಡರ್‌ನ್ನು ಸಲ್ಲಿಸುವುದು.**

**2.01 ತಾಂತ್ರಿಕ ಬಿಡ್ (Technical Bid) – (ಮೊದಲನೇ ಮೊಹರಾದ ಲಕೋಟೆ)**

1. ಟೆಂಡರ್‌ದಾರರು ಮೊಹರಾದ ಮೊದಲನೇ ಲಕೋಟೆಯನ್ನು (ತಾಂತ್ರಿಕ ಬಿಡ್ ಲಕೋಟೆ) ಈ ಟೆಂಡರ್ ಪ್ರಕಟಣೆಗೆ ಲಗತ್ತಿಸಿರುವ ನಮೂನೆ-1 ರಲ್ಲಿ ಪೂರ್ಣ ಮಾಹಿತಿಯನ್ನು ಅಗತ್ಯ ದೃಢಿಕೃತ ದಾಖಲಾತಿಯೊಂದಿಗೆ ಸಲ್ಲಿಸತಕ್ಕದ್ದು.
2. ಈ ಲಕೋಟೆ ಮೇಲೆ **"ಸನ್ನದು ಲೆಕ್ಕಿಗ ಸಂಸ್ಥೆಯ ಆಯ್ಕೆಗೆ ತಾಂತ್ರಿಕ ಬಿಡ್ ಲಕೋಟೆ"** ಎಂದು ನಮೂದಿಸತಕ್ಕದ್ದು.

**3.0 ಆರ್ಥಿಕ ಬಿಡ್ (Financial Bid) – (ಎರಡನೇ ಮೊಹರಾದ ಲಕೋಟೆ)**

1. ಸದರಿ ಟೆಂಡರ್‌ಗೆ ಹಿಂದಿನ ಸಾಲುಗಳ ಅನುಭವ ಆಧರಿಸಿ ಸೇವಾ ವೆಚ್ಚ ರೂ.2,00,000/- (ರೂಪಾಯಿ ಎರಡು ಲಕ್ಷಗಳು ಮಾತ್ರ) ವಾಗಬಹುದೆಂದು ಅಂದಾಜಿಸಲಾಗಿದೆ.
2. ಟೆಂಡರ್‌ದಾರರು ಮೊಹರಾದ ಎರಡನೇ ಲಕೋಟೆಯನ್ನು (ಆರ್ಥಿಕ ಬಿಡ್ ಲಕೋಟೆ) ಈ ಟೆಂಡರ್ ಪ್ರಕಟಣೆಗೆ ಲಗತ್ತಿಸಿರುವ ನಮೂನೆ-2 ರಲ್ಲಿ ಪೂರ್ಣ ಮಾಹಿತಿಯನ್ನು ಅಗತ್ಯ ದೃಢಿಕೃತ ದಾಖಲಾತಿಯೊಂದಿಗೆ ಸಲ್ಲಿಸತಕ್ಕದ್ದು.
3. ಈ ಲಕೋಟೆ ಮೇಲೆ **"ಸನ್ನದು ಲೆಕ್ಕಿಗ ಸಂಸ್ಥೆಯ ಆಯ್ಕೆಗೆ ಆರ್ಥಿಕ ಬಿಡ್ ಲಕೋಟೆ"** ಎಂದು ನಮೂದಿಸತಕ್ಕದ್ದು.
4. ಆರ್ಥಿಕ ಬಿಡ್‌ನಲ್ಲಿ ಬಿಡ್‌ನ ಮೊತ್ತವನ್ನು ರೂಪಾಯಿಗಳಲ್ಲಿ ನಮೂದಿಸತಕ್ಕದ್ದು. ಇದನ್ನು ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಒಂದು ವೇಳೆ ಅಂಕಿಗಳಿಗೂ ಮತ್ತು ಅಕ್ಷರಗಳಿಗೂ ತಾಳೆಯಾಗದಿದ್ದಲ್ಲಿ ಅಕ್ಷರಗಳಲ್ಲಿ ನಮೂದಿಸಿರುವ ಮೊತ್ತವನ್ನು ಮಾತ್ರ ಬಿಡ್ ದರವೆಂದು ತೀರ್ಮಾನಿಸಲಾಗುವುದು.
5. ನಿಯಮಗಳನ್ವಯ ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆಗಳನ್ನು ಸ್ಪಷ್ಟವಾಗಿ ಆರ್ಥಿಕ ಬಿಡ್‌ನಲ್ಲಿ ಪ್ರತ್ಯೇಕವಾಗಿ ನಮೂದಿಸತಕ್ಕದ್ದು.

4.0 ತಾಂತ್ರಿಕ ಬಿಡ್‌ನಲ್ಲಿ ತಾಂತ್ರಿಕ ಅರ್ಹತೆ ಹೊಂದಿರುವ ಬಿಡ್‌ದಾರರ ಬಿಡ್‌ಗಳ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುವುದು,

5.0 ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್‌ಗಳನ್ನು ಅಧಿಕೃತ ವ್ಯಕ್ತಿ/ಸಂಸ್ಥೆಯ ಮುಖ್ಯಸ್ಥರೇ ಸಹಿ ಮಾಡತಕ್ಕದ್ದು.

6.0 ಅತ್ಯಂತ ಕನಿಷ್ಠ ಆರ್ಥಿಕ ಬಿಡ್ ದರ ಸಲ್ಲಿಸುವ ಸಂಸ್ಥೆಯನ್ನು ಕರ್ನಾಟಕ ರಾಜ್ಯ ಗ್ರಾಮೀಣ ಉದ್ಯೋಗ ಖಾತ್ರಿ ನಿಧಿ ಸಂಘದ 2017–18 ರಿಂದ 2018–19 ರವರೆಗಿನ 2 ವರ್ಷಗಳ ಅವಧಿಗೆ ರಾಜ್ಯ ಮಟ್ಟದ ಲೆಕ್ಕಪತ್ರ ಕ್ರೋಢಿಕರಣ ಹಾಗೂ ದೃಢೀಕರಣ ಕಾರ್ಯ ಕೈಗೊಳ್ಳಲು ಆಯ್ಕೆ ಮಾಡಿ ಕಾರ್ಯಾದೇಶ ನೀಡಲಾಗುವುದು. ಆಯ್ಕೆ ಮಾಡಿದ ಸಂಸ್ಥೆಯು ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಳ್ಳತಕ್ಕದ್ದು. (ಒಪ್ಪಂದ ಪತ್ರದ ನಮೂನೆ ಲಗತ್ತಿಸಿದೆ)

7.0 ತಾಂತ್ರಿಕ ಬಿಡ್ ಅಥವಾ ಆರ್ಥಿಕ ಬಿಡ್ ಒಪ್ಪಿಗೆ/ನಿರಾಕರಣೆಗೆ ಸಂಪೂರ್ಣ ಹಕ್ಕನ್ನು ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರು ಹೊಂದಿರುತ್ತಾರೆ. ಬಿಡ್ ನಿರಾಕರಣೆಗೆ ಯಾವುದೇ ಕಾರಣವನ್ನು ನೀಡಲಾಗುವುದಿಲ್ಲ.

8.0 ದಿನಾಂಕ 12–02–2018 ರ ಸಂಜೆ 4 ಘಂಟೆಯ ನಂತರ ಯಾವುದೇ ತಾಂತ್ರಿಕ ಬಿಡ್/ಆರ್ಥಿಕ ಬಿಡ್‌ನ್ನು ಸ್ವೀಕರಿಸಲಾಗುವುದಿಲ್ಲ.

(signature) 08-01-18

**ಜಂಟಿ ನಿರ್ದೇಶಕರು (ತಾಂತ್ರಿಕ) ಹಾಗೂ ಟೆಂಡರ್**
**ಆಹ್ವಾನಿಸುವ ಅಧಿಕಾರಿ**
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ,

1) ಪ್ರಕಟಣಾ ಫಲಕಕ್ಕೆ

ಪ್ರತಿ–

1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗೆ.
2) ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಮಾಹಿತಿಗೆ.
3) ಜಂಟಿ ನಿರ್ದೇಶಕರು(ಆಡಳಿತ)/ತಾಂತ್ರಿಕ/ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಮಾಹಿತಿಗೆ.
4) ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಶಾಖೆಯ ಮಾಹಿತಿಗೆ.

8/1/18
8/1/18
08/1/18
8/1/18

# ನಮೂನೆ-1

## ತಾಂತ್ರಿಕ ಬಿಡ್ (Technical Bid) – ನಮೂನೆ

ಕರ್ನಾಟಕ ರಾಜ್ಯ ಗ್ರಾಮೀಣ ಉದ್ಯೋಗ ಖಾತ್ರಿ ನಿಧಿ ಸಂಘದ 2017-18 ರಿಂದ 2018-19 ರವರೆಗಿನ 2 ವರ್ಷಗಳ ಅವಧಿಗೆ ಸನ್ನದು ಲೆಕ್ಕದ ರಾಜ್ಯ ಮಟ್ಟದ ಲೆಕ್ಕಪತ್ರ ಕ್ರೋಢೀಕರಣ ಹಾಗೂ ದೃಢೀಕರಣ ಒದಗಿಸಲು ನಮೂದು ಮಾಡಿರುವ ತಾಂತ್ರಿಕ ಬಿಡ್ ವಿವರ

| ಕ್ರ.ಸಂ | ವಿವರಗಳು | |
|---|---|---|
| 1 | ಬಿಡ್ ದಾರರ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2 | ಬಿಡ್ ಸಲ್ಲಿಸಿದ ಸನ್ನದು ಲೆಕ್ಕಿಗ ಸಂಸ್ಥೆಯ ಹೆಸರು ಮತ್ತು ವಿಳಾಸ ದೂರವಾಣಿ ಸಂಖ್ಯೆಯೊಂದಿಗೆ (ವಿಳಾಸದ ಬಗ್ಗೆ ಅಗತ್ಯ ದಾಖಲಾತಿ ಸಲ್ಲಿಸುವುದು) | |
| 3 | ಸನ್ನದು ಲೆಕ್ಕಿಗ ಸಂಸ್ಥೆಯ ನೊಂದಣಿ ದಿನಾಂಕ (ಅಗತ್ಯ ದಾಖಲಾತಿ ಸಲ್ಲಿಸುವುದು) | |
| 4 | ಸನ್ನದು ಲೆಕ್ಕಿಗ ಸಂಸ್ಥೆಯ ಪ್ರಧಾನ ಕಾರ್ಯಸ್ಥಾನದ ವಿವರ ನೀಡುವುದು (ಅಗತ್ಯ ದಾಖಲಾತಿ ಸಲ್ಲಿಸುವುದು) | |
| 5 | ಸನ್ನದು ಲೆಕ್ಕಿಗ ಸಂಸ್ಥೆಯು ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಬಗ್ಗೆ ವಿವರಗಳ ಅಗತ್ಯ ದಾಖಲಾತಿಯೊಂದಿಗೆ ಸಲ್ಲಿಸುವುದು | |
| 6 | ಸರ್ಕಾರ ಸ್ವಾಮ್ಯದ/ವಿಶ್ವಬ್ಯಾಂಕ್ ನೆರವಿನ ಯೋಜನೆಗಳ ಲೆಕ್ಕಪತ್ರಗಳ ಲೆಕ್ಕ ತಪಾಸಣೆಯಲ್ಲಿ 3 ವರ್ಷಗಳ ಅನುಭವವನ್ನು ಹೊಂದಿರುವ ವಿವರ ನೀಡುವುದು (ಅಗತ್ಯ ದೃಢೀಕೃತ ದಾಖಲೆಗಳನ್ನು ಸಲ್ಲಿಸುವುದು) | |
| 7 | ಸಂಸ್ಥೆಯು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಲೆಕ್ಕಪತ್ರಗಳ ಲೆಕ್ಕ ತಪಾಸಣೆ ಕೈಗೊಂಡಿರುವ ಬಗ್ಗೆ ಕನಿಷ್ಠ 1 ವರ್ಷಗಳ ಅನುಭವ ಹೊಂದಿದೆಯೇ? ಹೊಂದಿದಲ್ಲಿ ಅಗತ್ಯ ದೃಢೀಕೃತ ದಾಖಲಾತಿಯನ್ನು ಸಲ್ಲಿಸುವುದು. | |
| 8 | ಸಂಸ್ಥೆಯ ಹಣಕಾಸಿನ ಸ್ಥಿತಿ ಮತ್ತು ಸಾಮರ್ಥ್ಯ (ಕಳೆದ 3 ವರ್ಷಗಳ ಆದಾಯ ತೆರಿಗೆ ವಿವರಗಳನ್ನು ನೀಡುವುದು) | |
| 9 | ಸಂಸ್ಥೆಯ ಕಳೆದ 3 ವರ್ಷಗಳ ಬ್ಯಾಲೆನ್ಸ್ ಶೀಟ್ ವಿವರ ನೀಡುವುದು (ಅಗತ್ಯ ದಾಖಲೆ ಸಲ್ಲಿಸುವುದು) | |

**ಟೆಂಡರ್‌ದಾರರ ಘೋಷಣೆ**

1) ಮೇಲೆ ನಮೂದಿಸಿರುವ ಎಲ್ಲಾ ವಿವರಗಳು ಸರಿಯಾಗಿರುತ್ತದೆಯೆಂದು ಮತ್ತು ಸತ್ಯ ವಾಗಿರುತ್ತದೆಯೆಂದು ದೃಢೀಕರಿಸಿದೆ.
2) ಟೆಂಡರ್ ನಿಯಮಗಳನ್ನು ಮತ್ತು ಷರತ್ತುಗಳಿಗೆ ಬದ್ದನಾಗಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತದೆಯೆಂದು ದೃಢೀಕರಿಸಿದೆ.

ಬಿಡ್‌ದಾರರ ಸಹಿ:– ________________

ಬಿಡ್‌ದಾರರ ಅಧಿಕೃತ ವಿಳಾಸ:–

ದೂರವಾಣಿ ಸಂಖ್ಯೆ:–ಸ್ಥಿರ ಮತ್ತು ಮೊಬೈಲ್ ದೂರವಾಣಿ ಸಂಖ್ಯೆ

ದಿನಾಂಕ:–

ಸಂಸ್ಥೆಯ ಮೊಹರು:-

## ನಮೂನೆ-2

## ಆರ್ಥಿಕ ಬಿಡ್ (Financial Bid) – ನಮೂನೆ

ಕರ್ನಾಟಕ ರಾಜ್ಯ ಗ್ರಾಮೀಣ ಉದ್ಯೋಗ ಖಾತ್ರಿ ನಿಧಿ ಸಂಘದ 2017-18 ರಿಂದ 2018-19 ರವರೆಗಿನ 2 ವರ್ಷಗಳ ಅವಧಿಗೆ ಸನ್ನದು ಲೆಕ್ಕದ ರಾಜ್ಯ ಮಟ್ಟದ ಲೆಕ್ಕಪತ್ರ ಕ್ರೋಢೀಕರಣ ಹಾಗೂ ದೃಢೀಕರಣ ಒದಗಿಸಲು ನಮೂದು ಮಾಡಿರುವ ವರ್ಷವಾರು ಆರ್ಥಿಕ ಬಿಡ್ ಮೊತ್ತದ ವಿವರ

| ಕ್ರ.ಸಂ | ವಿವರಗಳು | ಅಂಕಿಗಳಲ್ಲಿ (ರೂಪಾಯಿಗಳಲ್ಲಿ) | ಅಕ್ಷರಗಳಲ್ಲಿ (ರೂಪಾಯಿಗಳಲ್ಲಿ) |
|---|---|---|---|
| 1 | ವರ್ಷವಾರು ಆರ್ಥಿಕ ಬಿಡ್‌ನ ಮೊತ್ತ (ರೂಪಾಯಿಗಳಲ್ಲಿ) | | |
| | 2017-18 | | |
| | 2018-19 | | |

### ಟೆಂಡರ್‌ದಾರರ ಘೋಷಣೆ

1) ಮೇಲೆ ನಮೂದಿಸಿರುವ ಎಲ್ಲಾ ವಿವರಗಳು ಸರಿಯಾಗಿರುತ್ತದೆಯೆಂದು ಮತ್ತು ಅಂಕಿ ಅಂಶಗಳು ತಾಳೆಯಾಗಿರುತ್ತದೆ ಎಂದು ದೃಢೀಕರಿಸಿದೆ.
2) ಅಂಕಿ ಮತ್ತು ಅಕ್ಷರಗಳಲ್ಲಿ ದರ ವ್ಯತ್ಯಾಸವಾದಲ್ಲಿ ಯಾವುದು ಕಡಿಮೆಯೋ ಅದನ್ನು ಬಿಡ್ ದರವೆಂದು ಪರಿಗಣಿಸಬಹುದಾಗಿರುತ್ತದೆಯೆಂದು ದೃಢೀಕರಿಸಿದೆ.

ಬಿಡ್‌ದಾರರ ಸಹಿ:- ________________

ಬಿಡ್‌ದಾರರ ಅಧಿಕೃತ ವಿಳಾಸ:-

ದೂರವಾಣಿ ಸಂಖ್ಯೆ:-ಸ್ಥಿರ ಮತ್ತು ಮೊಬೈಲ್ ದೂರವಾಣಿ ಸಂಖ್ಯೆ

ದಿನಾಂಕ:-

ಸಂಸ್ಥೆಯ ಮೊಹರು:-